ತಾಲ್ಲೂಕು.	ಹುಟ್ಟುವಳಿಯ ತಪಸೀಲ್.
ಮೈಸೂರು ಹೆಗ್ಗಡದೇವನಕೋಟೆ ಹುಣಸೂರು ಗುಂಡ್ಲು ಪೇಟೆ ನಂಜನಗೂಡು ಜಾಮರಾಜನಗರ ತಿರುಮಕೋಡ್ಲು ನರಸೀಪುರ ಮಂಡ್ಯ ಶ್ರೀರಂಗಪಟ್ಣ ಯಡತೋರೆ	1 ಅಳಲೇಕಾಯಿ, 2 ತಾರೇಕಾಯಿ, 3 ಸೀಗೇಕಾಯಿ, 4 ಅಂಟುವಾಳದ ಕಾಯಿ, 5 ದಿಂಡಗದ ಬಂಕೆ, 6 ಕಾಡು ಅರಿಸಿನ, 7 ಜೀನುಮೇಣ, ವ ಜೀನುತುಪ್ಪ, 8 ಅರಗು, 9 ಕಪಿಲೇರಂಗು, 10 ಪಪ್ಲೀಚಕ್ಕೆ, 11 ಪತಂಗ, 12 ಮಡ್ಡಿ, 13 ಚಕ್ಕೆದಬೀಜ, 14 ಚೆಗಜೆ ಬೀಜ, 15 ಹೊಂಗೇಬೀಜ, 16 ಗೇರುಬೀಜ, 17 ಹಾಲು ಮಡ್ಡಿ, ಅವರಿಕೇ ಬಂಕೆ, 19 ಸಾರಗದ ಕೊಂಬು, 20 ಗುಗ್ಗಳ ವಗೈರೇ.

ಅಜಾರೇದಾರರಿಗೆ, ಹಿಡುವಳೀ ಜಮೀರ್ಗಳಲ್ಲೂ ಸ್ವಂತ ಅಮರಾಯಿಗಳಲ್ಲೂ ಯಿರುವ ಮರಗಳ ಹುಟ್ಟುವಳೀ ವಿಷಯದಲ್ಲಿ ಯಾವ ಹಕ್ಕು ದಾರಿಯೂ ಉಂಟಾಗತಕ್ಕದ್ದಲ್ಲವು.

ಚಡ ದರಖಾಸ್ತುದಾರನು, ದರಖಾಸ್ತು ಮೊಬಲಗ್ ಪೈಕೀ ನೇಕಡಾ 25ರ ಪ್ರಕಾರ ಕೂಡ್ಲೇ ಶೇವಣೀ ಯಿಟ್ಟು ಬಾಕೀ ಮೊಬಲಗನ್ನು ಡಿಸ್ಟ್ರಿಕ್ಟು ಯಾ ತಾಲ್ಲೂಕು ಖಜಾನೇಯಲ್ಲಿ ಸಮನಾದ ಮೂರು ಖಿಸ್ತುಗಳ ಪ್ರಕಾರ ಸ್ಯ 1884ನೇ ಇಸವಿ ಅಕ್ಟೋಬರ್ 1ನೇ ತಾರೀಖಿನಲ್ಲಿಯೂ, 1884ನೇ ನವಂಬರ್ 1ನೇ ವುರ್ಕುಂನಲ್ಲಿಯೂ, 1884ನೇ ಡಿಸಂಬರ್ 1ನೇ ತಾರೀಖಿನಲ್ಲಿಯೂ ಪಾವತಿ ಮಾಡತಕ್ಕದ್ದು.

ಯಾವ ಖಿಸ್ತಾಗಲಿ ಬಾಕೀಯಾದಾಗ ಪಾವತೀ ಮಾಡಲಿಕ್ಕೆ ತಪ್ಪಿದರೆ, 1885ನೇ ಇಸವೀ ಮಾರ್ಚೀ 31ರ ವರಿಗೆ ಸಾಲಿನ ಉಳಿದ ಭಾಗಕ್ಕೆ ಜಂಗ್ಲೀ ಹುಟ್ಟುವಳೀಯನ್ನು ಜವಾಬಿಸುವ ಹಕ್ಕು ಫಾರೆಸ್ಟು ಇಲಾಖೇಯವರಿಂದ ಪುನಃ ಹರಾಜು ಮಾಡಲ್ಪಡುವದು, ಅಥವಾ ಅಮಾನೀಯಲ್ಲಿ ಸದರೀ ಇಲಾಖೇಯವರಿಂದ ರೂಢಿಸಲ್ಪಡತಕ್ಕದ್ದು, ಹಣ ಕೊಡಲಿಕ್ಕೆ ತಪ್ಪಿದವನು ಅದರ ದೆಸೆಯಿಂದ ಉಂಟಾಗುವ ಯಾವ ನುಕ್ಸಾನಿಗಾಗಲಿ ಜವಾಬ್ದಾರನಾಗಿ ಮಾಡಲ್ಪಡತಕ್ಕದ್ದು.

ಫಾರೆಸ್ಟು ಪ್ರೊಬೇಷನರವರು, ದರಖಾಸ್ತು ಮಾಡಲಿಕ್ಕೆ ಖಾಯಿಷ್ ಮಾಡತಕ್ಕವರಿಗೆ ಬೇಕಾದ ಯಾವ ಸಂಗತಿಯನ್ನಾಗಲಿ, ಹರಾಜು ತಾರೀಖಿಗೆ ಮುಂದೆ ಅವರ ಆಫೀಸಿನಲ್ಲಿ ಖುದ್ ಖಾಯಿಷ್ ಮಾಡಿಕೊಂಡರೆ ತಿಳಿಸತಕ್ಕದ್ದು.

ಅಬ್ದುಲ್‌ಖಾದರ್ ಕೆ. ಬಿ.,
ಡೆಪ್ಯುಟಿ ಕಮ್ಮಿಷನರ್.

ತಾರೀಖು 14ನೇ ಮೇ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಭೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ಮಾಡಿದವನೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನಾಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶ ಪಡಿಸಲ್ಪಡುವದು

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
491 1881—82	ಕೇತಗಾಲದ ಗ್ರಾಮದ ಮಲ್ಲಯ್ಯನ ಬಸವಯ್ಯನ ಮಗ ವೀರಣ್ಣ ದ ಜಾತಿ, ಪಟೇಲ್	ಕೇತಗಾಲದ ಗ್ರಾಮದಲ್ಲಿ ಯಿರುವ ಕುರುಬರಜಾತಿ ಮಂಜ್ಯನೆಯ ಮಗ ಸುಬ್ಬ	14—12—81	14—12—81	90 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.